ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 2, Sep-Oct 2019, 66-74
©*IIMRD*, Mysuru
IIMRD JOURNALS
www.iimrd.com

# ಕನ್ನಡ ಭಾಷೆ, ಸಾಹಿತ್ಯದ ಇತಿಹಾಸ ಮತ್ತು ಕರ್ನಾಟಕ ಏಕೀಕರಣ

ರಾಜೇಶ್ವರಿ ರವಿ ಸಾರಂಗಮಠ.[1]

**ಪೀಠಿಕೆ**

ಕನ್ನಡ ಭಾಷೆಯ ಇತಿಹಾಸವನ್ನು ಅವಲೋಕಿಸಿದಾಗ, ಬಾದಾಮಿ ಶಾಸನ ಹಾಗೂ ಕವಿರಾಜಮಾರ್ಗ ಕೃತಿಯಿಂದ ಕನ್ನಡ ಸಾಹಿತ್ಯ, ಕನ್ನಡ ಕಾವ್ಯ, ಕನ್ನಡ ನಾಡು, ನುಡಿ ಮತ್ತು ಕನ್ನಡಿಗರ ಬಗ್ಗೆ ಉಲ್ಲೇಖ ಸಿಗುತ್ತದೆ. ಆರು ಮತ್ತು ಏಳನೇ ಶತಮಾನಗಳಲ್ಲಿ ಸಾಹಿತ್ಯ ಬೆಳೆದು ಬಂದಿರ ಬಹುದು ಎಂದು ಉಲ್ಲೇಖಿಸಲಾಗಿದೆ. ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯವನ್ನು 3 ಘಟ್ಟಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಹಳಗನ್ನಡ, ನಡುಗನ್ನಡ ಮತ್ತು ಆಧುನಿಕ ಕನ್ನಡ ಎಂದು ವಿಭಾಗಿಸಲಾಗಿದೆ. ಕುಮಾರವ್ಯಾಸರು ಪ್ರಾಯಶಃ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಪ್ರಭಾವಶಾಲಿ ಕವಿ ಎನ್ನಲಾಗಿದೆ. ಅಲ್ಲದೇ 15ನೇ ಶತಮಾನದಲ್ಲಿ ದಾಸ ಸಾಹಿತ್ಯ ಪರಂಪರೆಯಲ್ಲಿ ಪುರಂದರದಾಸ, ಕನಕದಾಸ, ವಿಜಯದಾಸ ಹೀಗೆ ಅನೇಕರು ದಾಸ ಸಾಹಿತ್ಯ ರಚನೆ ಮಾಡುವ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಗೆ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. ಹೀಗೆ ಅನೇಕ ರೀತಿಯಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದಿರುವುದು ಕಂಡುಬರುತ್ತದೆ.

ಅದೇನೆ ಇರಲಿ ಸಾಹಿತ್ಯ ರಚನೆ ಜನ ಸಾಮಾನ್ಯರ ಮಟ್ಟದಿಂದ ಮೇಲೇರಿ ಅದೊಂದು ಕಲೆ ಮತ್ತು ಶಾಸ್ತ್ರೀಯ ಸ್ಥಾನ ಪಡೆದಿದ್ದಂತೂ ನಿಜ. ಕಲೆ ಎಂದ ಮೇಲೆ ಪ್ರತಿಧ್ಯೇಯ ಹಾಗೂ ಶಾಸ್ತ್ರ ಎಂದ ಮೇಲೆ ಅದಕ್ಕೊಂದು ನಿಶ್ಚಿತ ವಿಧಿ ವಿಧಾನಗಳು ಇರಬೇಕಲ್ಲವೇ? ಆದ್ದರಿಂದ ಅಂತಹ ನಿರಂತರ ಪ್ರಯತ್ನಗಳು ನಡೆದು ಬಂದು ಸಾಹಿತ್ಯದ ಚರಿತ್ರೆಯಲ್ಲಿ ಅಮೂಲ್ಯವಾದ ಮೈಲುಗಲ್ಲಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಗುರಿ ಇಟ್ಟುಕೊಂಡು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದನ್ನ ವಿವರವಾಗಿ ಉಲ್ಲೇಖಿಸಲಾಗಿದೆ.

**ಕನ್ನಡ ಭಾಷೆಯ ಪ್ರಾಚೀನತೆ**

ಕನ್ನಡ ಸಾಹಿತ್ಯವು 1500 ರಿಂದ 2000 ವರ್ಷಗಳಷ್ಟು ಹಳೆಯದು ಎನ್ನಲು ಸಾಕಷ್ಟು ದಾಖಲಿತ ಸಾಕ್ಷಿಗಳಿವೆ. ಬ್ರಹ್ಮಗಿರಿಯ ಬಂಡೆಯಲ್ಲಿರುವ ಅಶೋಕನ ಶಾಸನದಲ್ಲಿರುವ ***ಇಸಿಲ*** ಎನ್ನುವುದೇ ಕನ್ನಡ ಭಾಷೆಯ ಅತೀ ಪ್ರಾಚೀನ ದಾಖಲೆಯಾಗಿದ್ದು, ಇದರ ಕಾಲ ಕ್ರಿ.ಪೂ. ಸುಮಾರು 252. ಪ್ರಾಚೀನ ಸಂಸ್ಕೃತ ಮಹಾಕಾವ್ಯ ವ್ಯಾಸಕೃತ ಮಾಹಾಭಾರತದಲ್ಲೆ ***ಕರ್ನಾಟಕ*** ಎಂಬ ಹೆಸರಿನ ಉಲ್ಲೇಖವಿದೆ. ತಮಿಳು ಭಾಷೆ ಕನ್ನಡ ಭಾಷೆಗಿಂತ ಪ್ರಾಚೀನವಾದುದು ಎಂದು ಕೆಲವರು ಹೇಳಿದರೂ ಕೂಡ ಶಾಸನಶಾಸ್ತ್ರದ ಪ್ರಸಿದ್ಧ

---

[1] *ಸಾಮಾಜಿಕ ಕಾರ್ಯಕರ್ತರು ಮತ್ತು ಹವ್ಯಾಸಿ ಬರಹಗಾರರು, ಹಾವೇರಿ. ತಾಲೂಕು ಮತ್ತು ಜಿಲ್ಲೆ.*

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ವಿದ್ವಾಂಸ ಐರಾವತಂ ಮಹದೇವನ ಪ್ರಕಾರ *"ಕನ್ನಡ ಶಾಸನಗಳು ಮತ್ತು ಸಾಹಿತ್ಯ ಕಾಲದ ಪರಿಚಿತ ಪೂರ್ವದಿಂದಲೇ ಕ್ರಿ.ಪೂ. 2ನೇ ಶತಮಾನ, ಕ್ರಿ.ಶ. 4ನೇ ಶತಮಾನ, ತಮಿಳು ಭಾಷೆಯ ಬ್ರಾಹ್ಮೀ ಶಾಸನಗಳ ಮೇಲೆ ಹಳಗನ್ನಡದ ಪ್ರಭಾವವಿತ್ತು."* ಇನ್ನೂ ಕ್ರಿ.ಶ. 1ನೇಯ ಅಥವಾ 2ನೇಯ ಶತಮಾನದ ಗ್ರೀಕ್ ದಾಖಲೆಯಲ್ಲಿ ಕನ್ನಡ ಶಬ್ದಗಳಿರುವುದನ್ನು 1904 ರಲ್ಲಿ ಪ್ರಾಧ್ಯಾಪಕ ಇ.ಹುಲ್ಟ್ ಅವರ ಪ್ರಬಂಧ *"ಏಡೀಯೋಟಿಕ್"* ಸೊಸೈಟಿಯವರ ಪ್ರಕಟಣೆ ಸಾಬೀತು ಮಾಡಿದೆ.

ಜಾಗತಿಕ ಮಟ್ಟದಲ್ಲಿ ಕನ್ನಡ ಕಾವ್ಯದ ಮಹತ್ವ ಹೆಚ್ಚಿನದ್ದಾಗಿದೆ. ಅತೀ ಹೆಚ್ಚು ಎನ್ನುವ ರೀತಿಯಲ್ಲಿ ಮಹಾಕಾವ್ಯಗಳು ಬಂದಿವೆ. ಪಂಪ, ರನ್ನ, ಪೊನ್ನ, ಜಿನ ರಾಘವಾಂಕ, ಕುಮಾರವ್ಯಾಸ ಮಹಾಕಾವ್ಯದ ನಿರ್ಮಾತೃಗಳು. ಶರಣ ಸಾಹಿತ್ಯದ ವಚನಗಳು ಜಗತ್ತಿನಲ್ಲಿ ಹೊಸತನ ಕಾವ್ಯವಾಗಿ ಕಾಣಿಸಿಕೊಂಡದ್ದು ಹೆಮ್ಮೆಯ ಸಂಗತಿ. ಜನ ಸಾಮಾನ್ಯರಿಂದ ಹುಟ್ಟಿದ ಚಳುವಳಿ ಈಗಲೂ ಒಂದು ಪ್ರೇರಣಾ ಕೇಂದ್ರ ವಚನ ಸಾಹಿತ್ಯ. ದಾಸ ಸಾಹಿತ್ಯ, ಜಾನಪದ ಸಾಹಿತ್ಯ, ನವೋದಯ, ದಲಿತ/ಬಂಡಾಯ ಸಾಹಿತ್ಯ, ಆಧುನಿಕ ಸಾಹಿತ್ಯದ ಹೆಜ್ಜೆಗಳಾಗಿವೆ.

ತೀ.ನಂ. ಶ್ರೀಕಂಠಯ್ಯನವರು ಕರ್ನಾಟಕ ದರ್ಶನ ಎಂಬ ಗ್ರಂಥದಲ್ಲಿ ಕನ್ನಡ ಭಾಷೆಯು ಕ್ರಿ.ಪೂರ್ವದಲ್ಲೇ ಅಸ್ತಿತ್ವಕ್ಕೆ ಬಂದಿರಬೇಕೆಂದು ಊಹಿಸಿದ್ದಾರೆ. ಹೀಗೆ ಕ್ರಿಸ್ತ ಶಕದ ಆರಂಭದಿಂದಲೂ ಇರುವ ಕನ್ನಡ ಕ್ರಿ.ಶ. 4ನೇ ಶತಮಾನದಲ್ಲಿ ಆಡಳಿತ ಭಾಷೆಯಾಗಿತ್ತು. ಮತ್ತು ನಿಧಾನವಾಗಿ ಕ್ರಿ.ಶ. 5ನೇ ಶತಮಾನದ ವೇಳೆಗೆ ಸಾಹಿತ್ಯ ಭಾಷೆಯಾಯಿತು. ಅಂದರೇ ಸುಮಾರು ಕ್ರಿ.ಶ. 1550 ವರ್ಷಗಳ ಹಿಂದೆಯೇ ಕನ್ನಡವು ಒಂದು ಆಡಳಿತ ಭಾಷೆ ಮತ್ತು ಸಾಹಿತ್ಯ ಭಾಷೆಯಾಗತೊಡಗಿತ್ತೆಂದು ಖಚಿತವಾಗಿ ಹೇಳಬಹುದು.

ಕ್ರಿಸ್ತಪೂರ್ವದಲ್ಲೇ ಕನ್ನಡ ಭಾಷೆ ತನ್ನ ಸ್ವಾತಂತ್ರ್ಯ ಅಸ್ತಿತ್ವವನ್ನು ಹೊಂದಿತ್ತು. ಕ್ರಿಸ್ತಶಕದ ಆರಂಭದ ವೇಳೆಗೆ ಅದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿತ್ತು. ಕ್ರಿ.ಶ. 4–5 ನೇ ಶತಮಾನದ ವೇಳೆಗೆ ಸ್ವತಂತ್ರ ಲಿಪಿಯನ್ನು ರೂಢಿಸಿಕೊಂಡು ಭಾಷೆಯನ್ನು ಬರಹ ರೂಪದಲ್ಲಿಳಿಸತೊಡಗಿತ್ತು. ಕ್ರಿ.ಶ. 450 ನೇ ಕಾಲದ ಕನ್ನಡದಲ್ಲಿ ದೊರೆತ ಮೊಟ್ಟ ಮೊದಲ ಶಿಲಾಶಾಸನವೆನಿಸುವ ಹಲ್ಮೀಡಿ ಶಾಸನದಲ್ಲಿ ಕನ್ನಡ ಭಾಷೆ ಸಂಸ್ಕೃತಮಯವಾಗಿದೆ.

**ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿ ಇಲಾಖೆ ಸ್ಥಾಪನೆ**

ಶ್ರೀಯುತ ಎ.ಎನ್. ಮೂರ್ತಿರಾವ್ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಕೆಂಗಲ್ ಹನುಮಂತಯ್ಯನವರು ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾಗಿದ್ದರು. ಅವರು ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿಗಾಗಿ ಒಂದು ಇಲಾಖೆಯನ್ನು ಸ್ಥಾಪಿಸಿದರು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗೆ ಉದಾರವಾಗಿ ಧನಸಹಾಯ ಮಾಡಿದರು. ಸನ್ 1956 ರಲ್ಲಿ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಯವರು ಪರಿಷತ್ತಿನ ಪ್ರಕಟಣೆಗೆ ಉದಾರವಾಗಿ ಧನಸಹಾಯವನ್ನು ಮಾಡಿದರು. ಇವರು ಪರಿಷತ್ತಿನ ನಿಬಂಧನೆಗಳನ್ನು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟಿಸಿದರು. ಸಮಸ್ತ ಕನ್ನಡಿಗರು ಪರಿಷತ್ತಿನೊಡನೆ ನಿಕಟತೆಯನ್ನು ಪಡೆಯಬೇಕೆಂದು ಶಿವಮೂರ್ತಿಶಾಸ್ತ್ರಿ ಅವರು ಪ್ರಯತ್ನಶೀಲರಾದರು. ಇವರ ಕಾಲಾವಧಿಯಲ್ಲಿ ಜಿಲ್ಲಾ ಸಮಿತಿಗಳು ಅಸ್ಥಿತ್ವಕ್ಕೆ ಬಂದವು. ಆ ಮೂಲಕ ಪರಿಷತ್ತಿನ ಕಾರ್ಯಚಟುವಟಿಕೆಗಳು ನಿಜವಾದ ಅರ್ಥದಲ್ಲಿ ವ್ಯಾಪಕವಾಗಿ ಜನರೆಡೆಗೆ ಪರಿಷತ್ತು ಸಾಗುವಂತಾಯಿತು. ಪುಸ್ತಕಗಳ ಪ್ರಕಟಣೆ, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು,

ಸುವರ್ಣ ಮಹೋತ್ಸವ ಕಟ್ಟಡ ನಿರ್ಮಾಣ, ಕನ್ನಡಿಗರಿಗೆ ಕನ್ನಡ ಕಲಿಯುವ ಸೌಲಭ್ಯ, ಹೊರನಾಡ ಕನ್ನಡ ಸಂಘಗಳಿಗೆ ಧನಸಹಾಯ ಸಂಶೋಧನೆ ಹಾಗೂ ಸಾಹಿತ್ಯ ಕಮ್ಮಟಗಳು, ಸಾಕ್ಷರತಾ ಪ್ರಸಾರ ಮೊದಲಾದ ಹೊಸ ಬಗೆಯ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಿದರು. ಸಾಂಸ್ಕೃತಿಕ ವಸ್ತುಸಂಗ್ರಹಾಲಯ, ಶಾಸನಶಾಸ್ತ್ರ ತರಗತಿಗಳ ಆರಂಭ, ದತ್ತಿನಿಧಿಗಳ ಸ್ಥಾಪನೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂದು ಕರೆದು ರಾಷ್ಟ್ರದ ರಾಜಧಾನಿ ದೆಹಲಿ ಸಮ್ಮೇಳನವನ್ನು ಸಂಘಟಿಸಿದ್ದು ಇತಿಹಾಸ.

**ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ ಮತ್ತು ಬೆಳವಣಿಗೆ**

1915 ರಲ್ಲಿ ಕನ್ನಡ ಕಾರ್ಯಕರ್ತರ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಇವರ ಸಲಹೆಗೆ ಪೂರಕವಾಗಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಬೆಂಬಲವಾಗಿ ನಿಂತಿದ್ದರಿಂದ, 1915 ರಲ್ಲಿ ಕರ್ನಾಟಕ ಭಾಷಾ ಪರಿಷ್ಕರಣ, ಭಾಷೋನ್ನತಿ, ಗ್ರಂಥಾಭಿವೃದ್ಧಿಗಳೇ ಮುಖ್ಯ ಉದ್ದೇಶವಾಗಿದ್ದು, ಇಡೀ ಕರ್ನಾಟಕವನ್ನು ಪ್ರತಿನಿಧಿಸುವ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡಿತು.

**ಕಲೆ, ಸಾಹಿತ್ಯದ ಮೂಲಕ ಬೆಸುಗೆ**

ಕಲೆ ಮತ್ತು ಸಾಹಿತ್ಯದ ಮೂಲಲಕ ಕನ್ನಡಿಗರ ಮಧ್ಯ ಸಾಸ್ಕೃತಿಕ ಬೆಸುಗೆ ಬೆಳೆದಿದೆ. ಉತ್ತರ ಕರ್ನಾಟಕದ ಆಡುಭಾಷೆಯ ನಾಟಕಗಳು ಹಳೆಯ ಮೈಸೂರು ಭಾಗದವರಿಗೆ ತುಂಬಾ ಇಷ್ಟವಾಗುತ್ತವೆ. ಬೇಂದ್ರೆ ಅವರ ಕಾವ್ಯಗಳು ದಕ್ಷಿಣ ಭಾಗದ ಕನ್ನಡಿಗರಿಗೆ ಅತೀ ಹೆಚ್ಚು ಅನ್ನುವಷ್ಟು ಇಷ್ಟವಾದರೆ, ಉತ್ತರ ಕರ್ನಾಟಕದವರ ಬಾಯಲ್ಲಿ ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ ಅವರ ಕವಿತೆಗಳು ಗುನುಗುತ್ತವೆ. ಎಲ್ಲ ಭಾಗದಲ್ಲಿ ಪುಸ್ತಕ ಪ್ರಕಾಶನದ ಕಾರ್ಯ ನಡೆದಿದೆ. ಉತ್ತರ–ದಕ್ಷಿಣ–ಮಧ್ಯ ಹೀಗೆ ಸಂಪೂರ್ಣ ಕರ್ನಾಟಕದ ಮನಸ್ಸುಗಳು ಅಕ್ಷರ ಮೂಲಕ ಸಾಮರಸ್ಯ ಬೆಳಸಿಕೊಳ್ಳತ್ತಿವೆ. ಕರ್ನಾಟಕದಲ್ಲಿ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತಗಳು ಎಲ್ಲ ಭಾಗದ ಜನರಿಂದ ಪ್ರಶಂಸೆಗೆ ಒಳಪಡುತ್ತಿವೆ. ಜಾನಪದ ಕಲೆಯು ಅಷ್ಟೇ ಕ್ರೀಡಾ ಕ್ಷೇತ್ರದಲ್ಲಿಯೂ ಸಮ್ಮಾನಗಳು ದಕ್ಕುತ್ತಿರುವುದು ಪ್ರತಿಯೊಬ್ಬರಿಗೂ ಸಂತಸದ ವಿಚಾರವಾಗಿದೆ.

ಕನ್ನಡ ಎನೆ ಕುಣಿದಾಡುವುದನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿಯೊಳು
ತೆಕ್ಕನೆ ಮನ ಮೈ ಮರೆಯುವುದು.

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಈ ಕವಿತೆ ಓದಿದಾಗಲೊಮ್ಮೆ ಮೈನವಿರೇಳುತ್ತದೆ. ಎಂದರೆ ಅದರಲ್ಲಿ ಅತಿಶಯೋಕ್ತಿ ಏನಿಲ್ಲ. ಕನ್ನಡ ನಾಡು–ನುಡಿ–ಜಲ–ನೆಲದ ವಿಷಯದಲ್ಲಿ ಕನ್ನಡಿಗರು ನಿಜಕ್ಕೂ ಹೆಮ್ಮೆಪಡುವಂತಹ ನಾಡು. ಕಬ್ಬಿಗರುದಿಸಿದ ಮಂಗಳಧಾಮ ಕವಿ ಕೋಗಿಲೆಗಳ ಪುಣ್ಯಧಾಮ ಎಂದು ಕವಿ ಕುವೆಂಪು ಅವರೇ ಇನ್ನೊಂದೆಡೆ ಹಾಡಿ ಹೊಗಳಿದ್ದಾರೆ.

ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ತುಂಬಾ ಪ್ರಾಚೀನವಾದದ್ದು. ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳಷ್ಟು ಇತಿಹಾಸವಿದ್ದು, ಸುಮಾರು ಆರು ಕೋಟಿ ಜನರು ಕನ್ನಡವನ್ನು

ಮಾತನಾಡುತ್ತಾರೆ. ಕನ್ನಡ ಭಾಷೆ ಸಾಹಿತ್ಯದ ಬರಹ ರೂಪದಲ್ಲಿ ಮೊದಲಿಗೆ ಕಾಣಿಸಿಕೊಂಡಿರುವುದು ಹಲ್ಮೀಡಿ ಶಾಸನದಲ್ಲಿ. ಏಳನೇ ಶತಮಾನದ ಅರಭಟ್ಟನ ಶಾಸನ, ಅಚ್ಚ ಕನ್ನಡ ಛಂದಸ್ಸು 'ತ್ರಿಪದಿ' ಯಲ್ಲಿದೆ. ಈಗ ನಮಗೆ ದೊರೆತಿರುವ ಮೊಟ್ಟ ಮೊದಲನೆಯ ಕನ್ನಡ ಗ್ರಂಥ ಕವಿರಾಜ ಮಾರ್ಗ, ನೃಪತುಂಗನ ಆಸ್ಥಾನ ಕವಿ ಶ್ರೀವಿಜಯ ಇದರ ಕರ್ತೃ. ಅಲ್ಲಿಂದ ಇಲ್ಲಿಯವರೆಗೂ ಕನ್ನಡ ಸಾಹಿತ್ಯ ಶ್ರೀಮಂತವೂ, ವೈವಿದ್ಯ ಪೂರ್ಣವಾಗಿಯೂ ಬೆಳೆದು ಬಂದಿದ್ದು. ಸಾಹಿತ್ಯದ ಹಲವು ಪ್ರಕಾರಗಳು ಕಾದಂಬರಿ, ಕಾವ್ಯ, ನಾಟಕ, ಗದ್ಯ, ವಿಮರ್ಶೆ, ಪ್ರವಾಸ ಕಥನ, ಸಣ್ಣ ಕತೆಗಳು, ವಿಜ್ಞಾನ, ಭಾವಗೀತೆ, ಭಾಷಾಂತರ ವಿಶ್ವಕೋಶ, ಹಾಸ್ಯ, ಮಕ್ಕಳ ಸಾಹಿತ್ಯ, ಮಹಿಳಾ ಸಾಹಿತ್ಯ, ಬಂಡಾಯ ಸಾಹಿತ್ಯ ಹೀಗೆ ಹತ್ತು ಹಲವು ಕನ್ನಡ ಸಾಹಿತ್ಯದಲ್ಲಿ ವಿಜೃಂಭಿಸಿವೆ.

**ಕರ್ನಾಟಕ ಏಕೀಕರಣ**

ಕನ್ನಡ ಜನ–ಮನ ಒಂದೇ ಎಂಬ ಮನೋಭಾವಕ್ಕೆ ಪೂರಕವಾಗಿ ನಮ್ಮ ಆಚಾರ–ವಿಚಾರ ಪರಂಪರೆಯ ಬೇರುಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕದ ಜನ ಈ ಮೊದಲೇ ನಡೆಸುತ್ತಿದ್ದ ನಾಡಹಬ್ಬಗಳು ವಿಶೇಷ ಮಹತ್ವ ಪಡೆದವು. 1920, 1924 ಹಾಗೂ 1946 ಬಹು ಮುಖ್ಯವಾದ ವರ್ಷಗಳು ಬೊಂಬಾಯಿಯಲ್ಲಿ ನಡೆದ ಹತ್ತನೆಯ ಏಕೀಕರಣ ಪರಿಷತ್ತು, ದಾವಣಗೆರೆಯಲ್ಲಿ ನಡೆದ ಕರ್ನಾಟಕಸ್ಥರ ಮಹಾಸಭೆಗಳು ಪ್ರಮುಖ ಘಟ್ಟಗಳಾದವು. ಸ್ವಾತಂತ್ರ್ಯ ಪೂರ್ವದಲ್ಲಿಯೇ ರಾಜ್ಯ ಸಂಘಟನಾ ಸಮಿತಿಯು 1946 ಡಿಸೆಂಬರ್‌ನಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಒಲವು ತೋರಿತ್ತು. ಆಗ ಕರ್ನಾಟಕ ಪ್ರಾಂತ್ಯವು ರಚನೆಯಾಗುತ್ತದೆಂದು ಎಲ್ಲರೂ ಬಾವಿಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ನಂತರ 1947ರಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಕಾಸರಗೋಡಿನಲ್ಲಿ ನಡೆಯಿತು. ದಿನಾಂಕ 30 ನವೆಂಬರ್ 1947ರ ಹರಿಜನ ಪತ್ರಿಕೆಯಲ್ಲಿ ಭಾಷಾ ಅನುಗುಣ ಪ್ರಾಂತ್ಯ ರಚನೆಗೆ ತಡೆ ಮಾಡಬಾರದೆಂದು ಗಾಂಧೀಜಿ ಕರೆ ನೀಡಿದರು. ಇದರಿಂದ ಕರ್ನಾಟಕ ಏಕೀಕರಣ ಚಳುವಳಿಗೆ ಬಲ ದೊರೆಯಿತು.

1936 ರವರೆಗೆ ಕರ್ನಾಟಕ ಏಕೀಕರಣವೆಂದರೇ, ಬ್ರಿಟೀಷ ಆಳ್ವಿಕೆಗೆ ಒಳಪಟ್ಟಿದ್ದ ಕನ್ನಡ ಪ್ರದೇಶಗಳ ಏಕೀಕರಣವೆಂದೆ ಪರಿಗಣಿಸಿತ್ತು. ಈಗ ಏಕೀಕರಣವು ಕನ್ನಡ ಭಾಷಿಕರಿರುವ ಎಲ್ಲಾ ಪ್ರದೇಶಗಳು ಎಂಬ ವಿಶಾಲ ವ್ಯಾಪ್ತಿಯ ಉದ್ದೇಶವನ್ನು ಶ್ರೀ ಎಸ್.ಎಸ್. ಮಳೀಮಠರು ಪ್ರಸ್ತಾಪಿಸಿ, ಸಂಸ್ಥಾನಗಳನ್ನೊಳಗೊಂಡ ಸಂಪೂರ್ಣ ಕರ್ನಾಟಕವನ್ನು ಒಂದೇ ಆಡಳಿತದಲ್ಲಿ ತರುವುದೇ ನಮ್ಮ ಗುರಿ ಎಂದು ಸಾರಿದರು.

**ಏಕೀಕರಣಕ್ಕಾಗಿ ಹೋರಾಡಿದವರು**

ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕ ಇಂದು ಒಂದಾದ ನೆಲದಲ್ಲಿ ಕಂಗೊಳಿಸುತ್ತಿದೆ ಎಂದರೆ ಅದಕ್ಕೆ ಕಾರಣ ಹರಿದು ಹಂಚಿ ಹೋಗಿದ್ದ ರಾಜ್ಯ ಏಕೀಕರಣಗೊಳಿಸಿದ ಕನ್ನಡದ ದಿಗ್ಗಜರಿಗೆ ಅದರ ಶ್ರೇಯಸ್ಸು ಸಲ್ಲುತ್ತದೆ. ಕರ್ನಾಟಕ ಏಕೀಕರಣಕ್ಕಾಗಿ ಬಹಳಷ್ಟು ಜನರು ಹೋರಾಡಿದ್ದಾರೆ. ಹುಯಿಲಗೋಳ ನಾರಾಣರಾಯರು ಕರ್ನಾಟಕ ಏಕೀಕರಣಕ್ಕಾಗಿ ಅನೇಕ ಕವಿತೆಗಳನ್ನು ರಚಿಸಿದರು. ಅದರಲ್ಲಿ ಬೆಳದಿಂಗಳು, ನಮ್ಮ ಚೆಲುವ ಕನ್ನಡ ನಾಡು, ಇಳೆಯೊಳಗೆ ಗೆಲುವ ಪಡೆದ ಭಾರತದ ಒಳನಾಡು ಎಂದು ಪದ್ಯ ರಚಿಸುವ ಮೂಲಕ ಎಲ್ಲರಿಗೂ ಕನ್ನಡದ ಬಗ್ಗೆ ಅರಿವು ಮೂಡಿಸಿದರು. ಹಾಗೇ ಕುವೆಂಪು ಅವರು ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವವರನ್ನು ಕೂಡಿಸಿ ಒಲಿಸು, ಹೊಟ್ಟೆಯ ಕಿಚ್ಚಿಗೆ ಕಣ್ಣೀರ ಸುರಿಸು,

ಒಟ್ಟಿಗೆ ಬಾಳುವ ತೆರದಲಿ ಹರಸು, ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ ಹೀಗೆ ಇನ್ನೂ ಹಲವಾರು ಕವಿಗಳು ಕಯ್ಯಾರ ಕೀಇಣ್ಣರೈ, ಡಿ.ಎಸ್.ಕರ್ಕಿ, ಕನ್ನಡ ದೈಮಮೈ, ಚನ್ನವೀರ ಕಣವಿ ಇನ್ನೂ ಮುಂತಾದವರು ಏಕೀಕರಣಕ್ಕಾಗಿ ಹೋರಾಡಿ ಕನಸನ್ನು ನನಸಾಗಿಸಿದ್ದಾರೆ. ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ ಕನ್ನಡವೇ ನಿತ್ಯ. ಎಂದು ಜನಮನ ಸೂರೆಗೊಂಡ ಕವಿತೆಯನ್ನು ರಚಿಸಿ. ಆ ಮೂಲಕ ಕನ್ನಡಿಗರ ಆಂತರ್ಯದಲ್ಲಿನ ಭಾಷಾ ಪ್ರೇಮವನ್ನು ಉದ್ದಿಪನಗೊಳಿಸುವ ಕೆಲಸವನ್ನು ಕವಿ ಕುವೆಂಪು ಮಾಡಿದ್ದಾರೆ.

ಶ್ರೀಯುತ ಡಿ.ವಿ.ಗುಂಡಪ್ಪನವರು 1933ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು. ಅವರ ಅವಧಿಯಲ್ಲಿ ಪ್ರತಿವಾರ ಭಾಷಣ, ಕಾವ್ಯವಾಚನ ಕಾರ್ಯಕ್ರಮ ಆಯೋಜನೆಗೊಂಡವು. ಗಮಕ ತರಗತಿ, ವಸಂತ ಸಾಹಿತ್ಯೋತ್ಸವ,  ಗ್ರಂಥ ಪ್ರದರ್ಶನ ಮೊದಲಾದವು ವಿಶಿಷ್ಟವಾಗಿ ರೂಪಿತವಾದವು. ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಏಳಿಗೆಗೆ ದುಡಿದರು. ಇವರು ಉಪಾಧ್ಯಕ್ಷರಾದ ನಂತರ ಮಹಿಳಾ ಶಾಖೆ ಆರಂಭವಾಯಿತು. ಪರಿಷತ್ತಿಗೆ ಲಾಂಛನ ಸಿದ್ದಗೊಂಡಿತು. ಪುಸ್ತಕ ಪ್ರಕಟಣೆಗೆ ಸಹಕಾರಿಯಾಗಬೇಕೆಂದು ಮುದ್ರಣಾಲಯ ಸ್ಥಾಪಿಸಲಾಯಿತು.  ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ ಇವರು 1943ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದರು. ಪರಿಷತ್ತಿನ ಕಾರ್ಯಗಳು ವಿಕೇಂದ್ರಿಕರಣಗೊಳ್ಳಬೇಕೆಂದು ಮಾಸ್ತಿಯವರು ಮೈಸೂರು, ಉತ್ತರ ಕರ್ನಾಟಕ, ಹೈದರಾಬಾದ ಮತ್ತು ಮದ್ರಾಸು ಪ್ರಾಂತ್ಯ ಸಮಿತಿಗಳನ್ನು ರಚಿಸಿದರು. ಅದರ ಪರಿಣಾಮವಾಗಿ ಪರಿಷತ್ತಿನ ಸದಸ್ಯರ ಸಂಖ್ಯೆ 1500ಕ್ಕೇರಿತು. ವಿದ್ಯಾರ್ಥಿಗಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಆಶುಭಾಷಣ, ದೇವರನಾಮ, ಅಭಿನಯ, ಕಂಠಪಾಠ ಸ್ಪರ್ಧೆಗಳು ಏರ್ಪಾಟಾದವು.  ಕರ್ನಾಟಕ ಏಕೀಕರಣ ಚಳುವಳಿಗೆ ಈ ಅವಧಿಯಲ್ಲಿ ಒತ್ತು ನೀಡಲಾಯಿತು.

**ಏಕೀಕರಣಕ್ಕಾಗಿ ಹೋರಾಡಿದ ಮಹಿಳೆಯರು**

ಸ್ವಾತಂತ್ರ್ಯ ಚಳುವಳಿಯ ಪ್ರೇರಣೆಯಿಂದ ಏಕೀಕರಣಕ್ಕೆ ಹೊಸ ಹುರುಪು ಸಿಕ್ಕಿತ್ತು. ಕರ್ನಾಟಕ ಏಕೀಕರಣಕ್ಕಾಗಿಯೂ ಮಹಿಳೆಯರು ಏರುಗಚ್ಚೆ ಹಾಕಿ ನಿಂತು ಹೋರಾಡಿದರು. ಅವರನ್ನು ಸ್ಮರಿಸದಿದ್ದರೆ ಕನಾಟಕದ ಏಕೀಕರಣದ ಇತಿಹಾಸ ಕ್ಷಮೀಸುವುದಿಲ್ಲವೇನೋ. ಏಕೀಕರಣ ಎಂದಾಕ್ಷಣ ಉತ್ತರ ಕರ್ನಾಟಕದ ಹೆಸರು ಬಲವಾಗಿ ಕೇಳಿಬರುತ್ತದೆ. ಅವರಲ್ಲಿ ಬಳ್ಳಾರಿ ಸಿದ್ದಮ್ಮನವರ ಹೆಸರು ಕೂಡ ಪ್ರಮುಖವಾದುದು. ಕರ್ನಾಟಕದ ಏಕೀಕರಣವಾಗದಿದ್ದರೇ ಮುಂದಿನ ದಿನಗಳಲ್ಲಿ ಏನೇನು ಸಮಸ್ಯೆಗಳಾಗುತ್ತವೆ ಎಂದು ಮನೆ ಮನೆಯಲ್ಲಿ ಮಕ್ಕಳಿಗೆ ತಿಳಿಸಿಕೊಡಲಾಗುತ್ತಿತ್ತು. ಹೆಣ್ಣು ಮಕ್ಕಳು ಮತ್ತು ಮಕ್ಕಳು ಈ ಬಗ್ಗೆ ಚಿಂತನೆ ನಡೆಸತೊಡಗಿದರು. ಏಕೀಕರಣದ ಅನೇಕ ಸಭೆಗಳಲ್ಲಿ ಹೆಣ್ಣು ಮಕ್ಕಳು ಪಾಲ್ಗೋಳ್ಳತೊಡಗಿದರು. ಧಾರವಾಡದ ಶ್ರೀ ಗದಿಗೆಯ್ಯಾ ಹೊನ್ನಾಪುರಮಠ ಅವರ ಮನೆಯಲ್ಲಿ ನಡೆದ ಏಕೀಕರಣದ ಸಭೆಯಲ್ಲಿ ಹೆಚ್ಚು ಅನ್ನುವಷ್ಟು ಹೆಣ್ಣು ಮಕ್ಕಳು ಪಾಲ್ಗೊಂಡು ನಾವು ನಿಮ್ಮೊಂದಿಗಿದ್ದೇವೆ ಎಂದು ಹಿರಿಯರಿಗೆ ಮನವರಿಕೆ ಮಾಡಿ ಕೊಟ್ಟಿದ್ದರು. ಹಳ್ಳಿ ಹಳ್ಳಿಗಳಲ್ಲಿ ಮಹಿಳೆಯರು ಹೋರಾಟ ಮಾಡಲು ಸಜ್ಜಾಗಿದ್ದರು.

**ಕನಸು ನನಸಾಗಿಸಿದವರು ಶ್ರೀ ಆಲೂರು ವೆಂಕಟರಾಯರು**

ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯ ಕನಸು ಕಾಣುತ್ತಿದ್ದ ಆಲೂರು ವೆಂಕಟರಾಯರ ಮೈ–ಮನಗಳ ತುಂಬಾ ದೇಶಭಕ್ತಿ ತುಂಬಿ ತುಳುಕುತ್ತಿದ್ದ ಮೂರ್ತಿವೆತ್ತ ರೂಪದಂತಿದ್ದರು. ಅವರಲ್ಲಿ ಪ್ರಾಂತೀಯ ಭಾವನೆಯಾಗಲೀ ಅಥವಾ ಕನ್ನಡದ ಭಾಷಾಂಧತೆಯಾಗಲಿ ಇರಲಿಲ್ಲ. ದೇಶ ವಿಮೋಚನೆಗಾಗಿ ಹೋರಾಟ ನಡೆಯುತ್ತಿದ್ದ ಕಾಲದಲ್ಲೇ ಅವರು ಅಖಂಡ ಕರ್ನಾಟಕದ ನಿರ್ಮಾಣಕ್ಕಾಗಿ ಪಣತೊಟ್ಟಿದ್ದು, ಇದಕ್ಕೆ ಕಾರಣ ಭವ್ಯ ಕರ್ನಾಟಕ ನಿರ್ಮಾಣದಿಂದ ಮಾತ್ರವೇ ಭವ್ಯ ಭಾರತ ಕಟ್ಟಲು ಸಾಧ್ಯ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. 'ರಾಷ್ಟ್ರೀಯತ್ವಕ್ಕೆ ವಿರುದ್ಧವಾದದ್ದು ಕರ್ನಾಟಕತ್ವವಲ್ಲ' ಎಂದು ಆಲೂರು ವೆಂಕಟರಾವ್ ಪ್ರತಿಪಾದಿಸಿದ್ದರು. ಕನ್ನಡಿಗ–ಕರ್ನಾಟಕಕ್ಕಾಗಿ ಎಲ್ಲವನ್ನು ಸಮರ್ಪಿಸಿದರು. ವ್ಯಕ್ತಿಗಿಂತ ರಾಜ್ಯ, ರಾಷ್ಟ್ರ ದೊಡ್ಡದು ಎಂದು ಸಾರಿ ಹೇಳಿದರು. ಕಡಪ ರಾಘವೇಂದ್ರರಾಯರು ಕರ್ನಾಟಕ ಸ್ವಭಾವ ಮೂಲಕ ಪ್ರಕಟಿಸಿದ ಕನ್ನಡಿಗರ ಕರ್ತವ್ಯ ಎಂಬ ಕಿರು ಹೊತ್ತಿಗೆಯು ಕನ್ನಡಿಗರ ಮನವೊಲಿಸಿ ಒಂದಾಗಬೇಕೆಂಬ ಪ್ರೇರಣೆ ನೀಡಲು ಸಹಕಾರಿಯಾತು.

**ಬಳ್ಳಾರಿ ಉಳಿಸಿದ ಸಿದ್ದಮ್ಮ**

ಉತ್ತರ ಕರ್ನಾಟಕದಲ್ಲಿ ಏಕೀಕರಣ ಕಾವು ದಿನೆ ದಿನೇ ಪ್ರಕರವಾಗುತ್ತಿತ್ತು. ಇತ್ತ ಮೈಸೂರು ಪ್ರಾಂತ್ಯದ ಜನರು ಹೆಚ್ಚಾಗಿ ಈ ಬಗ್ಗೆ ಒಲವು ತೋರಲಿಲ್ಲ. ರಾಜಕೀಯ ಪರಿಸ್ಥಿತಿ ತಿಳಿಯಾದ ಮೇಲೆ ಏಕೀಕರಣದ ಬಗ್ಗೆ ಚಿಂತಿಸೋಣ ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಉಪಸಮಿತಿ ನಿರ್ಧರಿಸಿತ್ತು. ಆದರೆ ಈ ವರದಿಯನ್ನು ಅರಸಿಕೆರೆಯಲ್ಲಿ ನಡೆದ ಸರ್ವಪಕ್ಷಗಳ ಸಭೆ ತಿರಸ್ಕರಿಸಿತ್ತು. ಆಗ ಇದರ ಅಧ್ಯಕ್ಷತೆಯನ್ನು ಇದೇ ಬಳ್ಳಾರಿ ಸಿದ್ದಮ್ಮನವರು ವಹಿಸಿದ್ದರು. ಆಗಲೇ ರಾಜ್ಯ ಪುನರ್ ವಿಂಗಡಣಾ ಆಯೋಗದ ವರದಿಯ ಪ್ರಕಾರ, ಬಳ್ಳಾರಿ ಆಂದ್ರಪ್ರದೇಶಕ್ಕೆ ಸೇರುವುದಿತ್ತು. ಹಳ್ಳಿ ಹಳ್ಳಿಗೆ ಹೋಗಿ ಮಹಿಳೆಯರಿಗೆ ಮನವರಿಕೆ ಮಾಡಿಕೊಟ್ಟರು. ಒಂದು ವೇಳೆ ಆಂದ್ರಕ್ಕೆ ಹೋದರೆ ಪರಿಸ್ಥಿತಿ ಏನಾಗುತ್ತದೆ ಎಂದು ತಿಳಿಸಿಕೊಟ್ಟರು. ಸಿದ್ದಮ್ಮನವರು ನೂರಾರು ಮಹಿಳೆಯರನ್ನು ಕಟ್ಟಿಕೊಂಡು ಚಿತ್ರದುರ್ಗಕ್ಕೆ ಬಂದು ಮುಖಂಡರನ್ನು ಬೇಟಿಯಾಗಿ ವಸ್ತು ಸ್ಥಿತಿಯನ್ನು ವಿವರಿಸಿ, ಬಳ್ಳಾರಿ ಕರ್ನಾಟಕಕ್ಕೆ ಸೇರಬೇಕು ಎಂದು ಸಮರ್ಥವಾಗಿ ವಾದ ಮಂಡಿಸಿದರು. ಹಾಗಾಗಿ ಬಳ್ಳಾರಿ ಕರ್ನಾಟಕಲ್ಲಿ ಉಳಿಯಿತು.

1924 ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾ ಅಧಿವೇಶನದ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೆ ವಿಶೇಷ ಚಾಲನೆ ದೊರೆಯಿತು. ಕರ್ನಾಟಕ ಸಭೆಯ ಮೊದಲ ಪರಿಷತ್ತು ಬೆಳಗಾವಿಯಲ್ಲಿ ದಿನಾಂಕ 25 ಡಿಸೆಂಬರ್ 1924 ರಂದು ಸರ್. ಸಿದ್ದಪ್ಪ ಕಂಬಳಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಹುಯಿಲುಗೋಳ ನಾರಾಯಣರಾಯರು ರಚಿಸಿದ "ಉದಯವಾಗಲೀ ನಮ್ಮ ಚಲುವ ಕನ್ನಡ ನಾಡು" ಎಂಬ ಗೀತೇಯನ್ನು ಮೊದಲಬಾರಿಗೆ ಹಾಡಲಾಯಿತು.

**ಏಕೀಕರಣಕ್ಕೆ ಹೆಚ್ಚಿದ ಒತ್ತಡ**

ದಿನಾಂಕ 28 ಮೇ 1953 ರಂದು ದಾವಣಗೆರೆಯಲ್ಲಿ ಸಭೆ ಸೇರಿ ಕರ್ನಾಟಕ ರಾಜ್ಯ ನಿರ್ಮಾಣ ಮಾಡುವುದು ಕನ್ನಡಿಗರ ಜನ್ಮಸಿದ್ಧ ಹಕ್ಕು ಎಂದು ಘೋಷಣೆಯೊಂದಿಗೆ ಮಾಜಿ ಸಂಸದ ಆಳವಂಡಿ ಶಿವಮೂರ್ತಿಸ್ವಾಮಿ, ಕೆ.ಆರ್. ಕಾರಂತರ ನೇತೃತ್ವದಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ದಿನಾಂಕ 18 ಏಪ್ರೀಲ್ 1956 ರಂದು ಕೇಂದ್ರ ಸಚಿವ ಗೋವಿಂದವಲ್ಲಭ ಪಂಥ್ ಅವರು ಲೋಕಸಭೆಯಲ್ಲಿ ವಿಧೇಯಕ ಮಂಡಿಸಿದರು. 1956 ನವೆಂಬರ್ 01 ರಂದು ಪುನರ್ವಿಂಗಡನೆಗೊಂಡ ರಾಜ್ಯಗಳೆಲ್ಲವೂ ಅಸ್ಥಿತ್ವಕ್ಕೆ ಬರಲಿವೆ ಎಂದು ಪ್ರಕಟಣೆ ಹೊರಬಿತ್ತು. 1956 ನವೆಂಬರ 01 ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಭಾರತ ಮೊದಲ ರಾಷ್ಟ್ರಪತಿ ಶ್ರೀಯುತ ಡಾ. ಬಾಬು ರಾಜೇಂದ್ರ ಪ್ರಸಾದ ಅವರು ವಿಶಾಲ ಮೈಸೂರು ರಾಜ್ಯದ ಉದ್ಘಾಟನೆ ಮಾಡಿದರು. ಮುಂದೆ ಮೈಸೂರು ರಾಜ್ಯವೆಂದು ಇದ್ದದ್ದು, ದಿನಾಂಕ 11 ಜನವರಿ 1973 ರಂದು ರಾಜ್ಯದ ಹೆಸರು ಅಧಿಕೃತವಾಗಿ ಕರ್ನಾಟಕ ಎಂದಾಯಿತು.

**ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ**

ಶಾಸ್ತ್ರೀಯ ಎಂಬುದು ಅಭಿಜಾತ ಮತ್ತು ಕ್ಲಾಸಿಕಲ್ ಎಂಬುದಕ್ಕೆ ಸಂವಾದಿ ಪದ ಮತ್ತು ಪರಿಕಲ್ಪನೆ. ಸಾಮಾನ್ಯವಾಗಿ ಸಂಸ್ಕೃತ, ಗ್ರೀಕ್, ಲ್ಯಾಟೀನ್, ಅರಬ್ಬಿ ಈ ಭಾಷೆಗಳನ್ನು ಶಾಸ್ತ್ರೀಯ ಎಂದು ವಿಶ್ವದಲ್ಲಿ ಪರಿಗಣಿಸಲಾಗಿತ್ತು. ಈಗ ಆ ಸ್ಥಾನಕ್ಕೆ ಹಲವಾರು ಭಾರತ ಮೂಲದ ಪ್ರಾಚೀನ ಭಾಷೆಗಳು ಸೇರತೊಡಗಿವೆ. ಭಾರತ ಸರಕಾರ ಮೊದಲ ಸಲ ಹೊರಡಿಸಿದ ಪ್ರಕಟಣೆಯಲ್ಲಿ ಒಂದು ಭಾಷೆಗೆ ಶಾಸ್ತ್ರೀಯ ಭಾಷೆಯ ಮನ್ನಣೆ ನೀಡ ಬೇಕಾದರೆ ಈ ಕೆಳಕಾಣಿಸಿದ ನಾಲ್ಕು ಅರ್ಹತೆಗಳನ್ನು ನಿಗದಿಪಡಿಸಿತು.

- ಒಂದು ಸಾವಿರ ವರ್ಷಗಳಿಗೂ ಮೇಲ್ಪಟ್ಟು ಹಿಂದಿನ ಪಠ್ಯಗಳು ದಾಖಲಿತ ಚರಿತ್ರೆಯ ಪ್ರಾಚೀನತೆ.
- ಭಾಷೆಯನ್ನು ಮಾತನಾಡುವ ಜನ ತಲೆಮಾರುಗಳಿಂದ ಒಂದು ಮೌಲ್ಯಿಕ ಪರಪಂರೆಯನ್ನು ಪರಿಗಣಿಸಿದ ಪ್ರಾಚೀನ ಸಾಹಿತ್ಯ ಪಠ್ಯಗಳ ಮೊತ್ತ.
- ಸಾಹಿತ್ಯ ಪರಂಪರೆ ಪ್ರಾಚೀನವಾಗಿರಬೇಕು ಮತ್ತು ಬೇರೆ ಯಾವುದೇ ಭಾಷಾ ಸಮುದಾಯದಿಂದಲೂ ಎರವಲು ಪಡೆದಿರಬಾರದು.
- ಶಾಸ್ತ್ರೀಯ ಭಾಷೆ ಮತ್ತು ಸಾಹಿತ್ಯಗಳ ಹಿಂದಿನ ರೂಪವು ಪ್ರಚಲೀತ ರೂಪದಿಂದ ಬಿನ್ನವಾಗಿರಬಹುದು.

ನಂತರ ಭಾರತ ಸರಕಾರ ತನ್ನ ಹಿಂದಿನ ನಂ.iv 140. 14–07–2004 ನಂ.IV, I-II ಎಸ್,ಪಿ ಪ್ರಕಟಣೆಗೆ ಮತ್ತೊಂದು ಪ್ರಕಟಣೆ ನೀಡಿತು. ಅದರಲ್ಲಿ ಈ ವಾಕ್ಯವನ್ನು ಸೇರಿಸಿತು. “1500–2000 ವರ್ಷಗಳಿಗೂ ಹಿಂದಿನ ಪಠ್ಯಗಳು, ದಾಖಲಿತ ಚರಿತ್ರ ಇರಬೇಕು” ಎಂದು ಸೂಚಿಸಿತು.

ಉಳಿದ ನಿಬಂಧನೆಗಳೆಲ್ಲಾ ಹಾಗೆಯೇ ಇರುತ್ತವೆ ಎಂದು ಈ ಪ್ರಕಟಣೆ ತಿಳಿಸಿತು. ಈ ಬದಲಾವಣೆ ವಿದ್ವತ್ತಿಗೆ ಸಂಬಂಧಪಡದೇ ತಮಿಳುನಾಡಿನ ಸರಕಾರವು ಕೇಂದ್ರದ ಮೇಲೆ ರಾಜಕೀಯ ಒತ್ತಡ ಹೇರಿದ್ದರ ಪರಿಣಾಮ ಎಂದು ತಿಳಿದು ಬರುತ್ತದೆ. ಆದರೂ ಕಡೆಗೂ ಕರ್ನಾಟಕ ಸರಕಾರದ ಮುಂದಾಳತ್ವ ಸಾಹಿತಿ–ವಿದ್ವಾಂಸರ ಹಕ್ಕೊತ್ತಾಯ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಭಾರತ ಸರಕಾರ ಗೊತ್ತುಮಾಡಿರುವ ವಸ್ತು–ನಿಷ್ಠ ಮತ್ತು ಕಟ್ಟುನಿಟ್ಟಾದ ಅನ್ವಯಕ್ಕೆ ಬೇಕಾದ ಅರ್ಹತೆಯ ಆಧಾರದ ಮೇಲೆ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿತು.

ಕನ್ನಡ ಭಾಷೆ ಮತ್ತು ಸಂಸ್ಕೃತಿ ಚಿಂತನೆ ಮಾಡುವಾಗ ಇಡೀ ಕನ್ನಡ ಸಾಹಿತ್ಯ ಪರಂಪರೆ ತುಂಬಾ ಮೌಲ್ಯಿಕ ಮತ್ತು ಮಹತ್ವದ್ದು. ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಭಾಷೆಗೆ ಬಂದದ್ದು, ಭಾಷೆ ಮತ್ತು ಸಂಸ್ಕೃತಿಯ ಆಳ ವಿಸ್ತಾರ ತೋರಿಸುವಂತದ್ದು.


**ಉಪ ಸಂಹಾರ**


ಕನ್ನಡ ಸಾಹಿತ್ಯ ಚರಿತ್ರೆಯ ಉಗಮ ಮತ್ತು ವೈಶಿಷ್ಟ್ಯತೆಗಳನ್ನು ಗಮನಿಸಿದಾಗ, ಹಲವಾರು ಗುರಿ, ಉದ್ದೇಶಗಳನ್ನು ಇಟ್ಟುಕೊಂಡು ಉಗಮವಾಗಿರುವ ಈ ಕನ್ನಡ ಭಾಷೆಯು ಅನೇಕ ಜನರ ಮನಸ್ಸಿನ ಭಾವನೆಗಳು, ಅನುಭವಗಳನ್ನು ಒಂದೆಡೆ ಕ್ರೋಢಿಕರಿಸಿಕೊಂಡು ಹರಿದು–ಹಂಚಿ ಹೋಗಿರುವ ಎಲ್ಲರ ಭಾವನೆಗಳನ್ನು ಕೂಡಿಸುವುದು ಇತಿಹಾಸದಲ್ಲಿ ಅವಶ್ಯಕವಾಗಿತ್ತು. ಆದರೂ ಅನ್ಯ ಭಾಷೆಗಳ ಒತ್ತಡ ಹಾಗೂ ಪ್ರಭಾವದಿಂದಾಗಿ ಅಭಿವೃದ್ಧಿಗೆ ಬಾರದಂತಿರುವ ಭಾಷೆಯನ್ನು ಹೊಂದಿಸಿಕೊಂಡು, ಅದರ ಅಸ್ತಿತ್ವವನ್ನು ಉಳಿಸಿಕೊಂಡು ಹೋಗುವುದು ತುಂಬಾ ಅಗತ್ಯವಾಗಿದೆ.

IIMRD JOURNALS

## ಅನುಬಂಧ–1

### ಕನ್ನಡ ಭಾಷೆಯ ಉಗಮ ವಿಕಾಸದ ವೃಕ್ಷಚಿತ್ರ




*ಲೇಖಕರು ಮೂಲತಃ ಹವ್ಯಾಸಿ ಬರಹಗಾರರಾಗಿದ್ದು, ಸಮಾಜಿಕ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಪದವೀಧರರಲ್ಲದಿದ್ದರೂ ಹಲವಾರು ಕಾದಂಬರಿಗಳನ್ನು ಹಾಗೂ ಕವಿತೆಗಳನ್ನು ಬರೆದಿದ್ದು ಅನೇಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.*